# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಬಿಡಿ/1468/2021
ಮಂಡನಾಧಿಕಾರಿಗಳ ಶಾಖೆ

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 25-01-2022.

22

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ: ಡಾ: ವೈ.ಎಲ್.ದೇವರಾಜು, ಉಪ-ವ್ಯವಸ್ಥಾಪಕರು, ತುಮಕೂರು ಹಾಲು ಒಕ್ಕೂಟ, ಪಶು ವೈದ್ಯಕೀಯ ವಿಭಾಗ, ಮಲ್ಲಸಂದ್ರ, ತುಮಕೂರು,** – ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

-----

1. ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ತುಮಕೂರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **ಡಾ: ವೈ.ಎಲ್.ದೇವರಾಜು, ಉಪ-ವ್ಯವಸ್ಥಾಪಕರು, ತುಮಕೂರು ಹಾಲು ಒಕ್ಕೂಟ, ಪಶು ವೈದ್ಯಕೀಯ ವಿಭಾಗ, ಮಲ್ಲಸಂದ್ರ, ತುಮಕೂರು,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀ ಎಂ.ಆರ್.ಸುರೇಶ್ ಬಿನ್ ರಾಮಯ್ಯ, ವ್ಯವಸಾಯ, ಮಾವಿನಕೆರೆ ಗ್ರಾಮ, ದಬ್ಬೇಘಟ್ಟ ಹೋಬಳಿ, ತುರುವೇಕೆರೆ ತಾ: ತುಮಕೂರು ಜಿಲ್ಲೆ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. **ದೂರಿನ ಸಂಕ್ಷಿಪ್ತ ಮಾಹಿತಿ :-**

i). ದೂರುದಾರರು ತಮ್ಮ ದೂರಿನಲ್ಲಿ, ತಾನು ಹೈನುಗಾರಿಕೆ ಮಾಡಲು ಮೂರು ಸೀಮೆ ಹಸುಗಳನ್ನು (ಹೆಚ್.ಎಫ್) ತಲಾ ಒಂದಕ್ಕೆ 50,000/- ರೂ.ಗಳಂತೆ ಪ್ರತ್ಯೇಕವಾಗಿ ಯುನೈಟೆಡ್ ಇನ್ಸೂರೆನ್ಸ್ ಮಾಡಿಸಿದ್ದು, ವಾರ್ಷಿಕ 890/- ರೂ.ಗಳ ಪ್ರೀಮಿಯಂ ಗಳನ್ನು ಕಟ್ಟಿರುತ್ತಾರೆ. ಸದರಿ ಇನ್ಸೂರೆನ್ಸ್ ಮಾಡಿಸಿದ ಹಸುಗಳ ಪೈಕಿ ಒಂದು ಹಸು ದಿನಾಂಕ: 25-2-2018 ರಂದು

ಖಾಯಿಲೆಯಿಂದ, ದಿನಾಂಕ: 26-2-2018 ರಂದು ಮರಣ ಹೊಂದಿರುತ್ತದೆ. ತದ್ನನಂತರ, ದೂರುದಾರರು ಸದರಿ ವಿಚಾರವನ್ನು ಅದೇ ದಿನ ಮಾವಿನಕೆರೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯದರ್ಶಿ ಶ್ರೀ ಬಿಎಂ.ಹನುಮಂತಯ್ಯ ಹಾಗೂ ಅಂಚೀಹಳ್ಳಿ ಪಶು ಚಿಕಿತ್ಸಾಲಯ, ವೈದ್ಯಾಧಿಕಾರಿ ಶ್ರೀ ರೇವಣ್ಣ ಸಿದ್ದಯ್ಯ ರವರುಗಳಿಗೆ ತಿಳಿಸಿದಾಗ, ವೈದ್ಯಾಧಿಕಾರಿ ಶ್ರೀ ರೇವಣ್ಣ ಸಿದ್ದಯ್ಯ ರವರು ಬಂದು ಹಸುವಿನ ಪೋಸ್ಟ್ ಮಾರ್ಟಂ ಮಾಡಿ ವರದಿ ನೀಡಿರುತ್ತಾರೆ.

ii). ನಂತರ ದೂರುದಾರರು ಹಸುವಿನ ಇನ್ಸೂರೆನ್ಸ್ ಕ್ಲೇಮ್ ಗಾಗಿ ಎಲ್ಲಾ ದಾಖಲಾತಿಗಳನ್ನು ಪಡೆದು, ಎದುರುದಾರರನ್ನು ಬೇಟಿ ಮಾಡಿ, ಅರ್ಜಿಯೊಂದಿಗೆ ಕೊಟ್ಟಿರುತ್ತಾರೆ. ಆ ಸಮಯದಲ್ಲಿ ಎದುರುದಾರರು ಇನ್ಸೂರೆನ್ಸ್ ಕಂಪನಿಯವರಿಗೆ ಕೊಡಬೇಕೆಂದು ಹೇಳಿ, ದೂರುದಾರರಿಂದ 5000/- ರೂ.ಗಳ ಹಣವನ್ನು ಪಡೆದುಕೊಂಡಿರುತ್ತಾರೆ. ತದನಂತರ, ಎದುರುದಾರರು ದೂರುದಾರರಿಗೆ ಪೋನ್ ಮಾಡಿ, ಮತ್ತೆ 5000/- ರೂ.ಗಳನ್ನು ಇನ್ಸೂರೆನ್ಸ್ ಕಂಪನಿಯವರಿಗೆ ಕೊಡಬೇಕೆಂದು ಹೇಳಿ, ದೂರುದಾರರನ್ನು ಕಛೇರಿಗೆ ಕರೆಸಿಕೊಂಡು ಅವರಿಂದ ಪಡೆದುಕೊಂಡಿರುತ್ತಾರೆ. ತದನಂತರ ದಿನಾಂಕ: 6-6-2018ರ ಪೂರ್ವದಲ್ಲಿ ಅಂದರೆ 25 ರಿಂದ 30 ದಿನಗಳಲ್ಲಿ ಎದುರುದಾರರು ದೂರುದಾರರಿಗೆ ಪೋನ್ ಮಾಡಿ, ಚೆಕ್ಕು ರೆಡಿಯಾಗಿದೆ ಇನ್ಸೂರೆನ್ಸ್ ಕಂಪನಿಗೆ ಹೋಗಿ ತರುತ್ತೇನೆ ಎಂದು ಹೇಳಿ ದೂರುದಾರರನ್ನು ಕಛೇರಿಗೆ ಕರೆಸಿಕೊಂಡು, 2000/- ರೂ.ಗಳ ಲಂಚದ ಹಣವನ್ನು ಕೇಳಿ ಪಡೆದುಕೊಂಡಿರುತ್ತಾರೆ.

iii). ದಿನಾಂಕ: 04-6-2018 ರಂದು ಎದುರುದಾರರು ತನ್ನ ಮೊಬೈಲ್ ನಂ: 7760965219 ರಿಂದ ದೂರುದಾರರ ಮೊಬೈಲ್‌ಗೆ ಕರೆ ಮಾಡಿ, ಹಸುವಿನ ಇನ್ಸೂರೆನ್ಸ್ ಚೆಕ್ಕು ರೆಡಿಯಾಗಿ ಬಂದಿದೆ. ಈ ಮೊದಲು ನಿಮ್ಮಿಂದ ಪಡೆದ ಹಣ ಇನ್ಸೂರೆನ್ಸ್ ಕಂಪನಿಯವರಿಗೆ ಕೊಟ್ಟಿರುತ್ತೇನೆ. ನನ್ನ ಹತ್ತಿರ ನೀವು ಕೊಟ್ಟ ಹಣ ಇರುವುದಿಲ್ಲ. ಆದ್ದರಿಂದ ಮತ್ತೊಮ್ಮೆ ಹಣ ತಂದುಕೊಟ್ಟು ಚೆಕ್ಕು ಪಡೆದುಕೊಂಡು ಹೋಗಿ ಎಂದು ದೂರುದಾರರಿಗೆ ತಿಳಿಸಿರುತ್ತಾರೆ. ಸದರಿ ಸಂಭಾಷಣೆಯನ್ನು ದೂರುದಾರರು ತನ್ನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ದೂರುದಾರರಿಗೆ ಲಂಚದ ಹಣ ನೀಡಿ ಕೆಲಸ ಮಾಡಿಸಿಕೊಳ್ಳಲು ಇಷ್ಟವಿಲ್ಲದ್ದರಿಂದ, ದಿನಾಂಕ: 06-06-2018 ರಂದು ಪೊಲೀಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ತುಮಕೂರು, ಇವರಿಗೆ ಎದುರುದಾರರಾದ ನಿಮ್ಮ ವಿರುದ್ದ ದೂರನ್ನು ನೀಡಿರುತ್ತಾರೆ ಹಾಗೂ ಸಂಭಾಷಣೆ ಇದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ಅದರಂತೆ, ಮೊಕದ್ದಮೆ ಸಂಖ್ಯೆ : 02/2018 ಪಿಸಿ ಕಾಯಿದೆ ಕಲಂ 1988 ಕಲಂ 7ರ ನ್ವಯ ಪ್ರ.ವ. ವರದಿ ದಾಖಲಾಗಿರುತ್ತದೆ.

iv). ದಿನಾಂಕ: 06-06-2018 ರಂದು, ತನಿಖಾಧಿಕಾರಿಯವರು ಪಂಚರಾದ ಫಾಜಿಲ್ ಅಹಮದ್ ಪಂಚ-1, ದಿನೇಶ್.ಎಂ ಪಂಚ-2, ಇವರನ್ನು ಬರಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ 3000/- ಗಳನ್ನು ಹಾಗೂ ಸಂಭಾಷಣೆ ದಾಖಲಾಗಿದ್ದ ಮೊಬೈಲ್‌ನ್ನು

ಹಾಜರುಪಡಿಸಿರುತ್ತಾರೆ. ಪಂಚರು ಲಂಚದ ಹಣದ ಮೌಲ್ಯ ಮತ್ತು ನಂಬರುಗಳನ್ನು ಪರಿಶೀಲಿಸಿ ಆ ಪೈಕಿ, ಪಂಚ-1 ಸದರಿ ಹಣದ ಮೌಲ್ಯ ಮತ್ತು ನಂಬರನ್ನು ಬಿಳಿ ಹಾಳೆಯಲ್ಲಿ ದಾಖಲಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿ ಸೂಚನೆಯ ಮೇರೆಗೆ ಪಂಚ-2 ದಿನೇಶ್.ಎಂ ಇವರು ಪೊಲೀಸ್ ಸಿಬ್ಬಂದಿಯಿಂದ ಫಿನಾಪ್ತಲೀನ್ ಪೌಡರ್ ಲೇಪಿಸಿದ ಹಣವನ್ನು ಎಣಿಸಿ ದೂರುದಾರರ ಶರ್ಟಿ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿ ದೂರುದಾರರಿಗೆ ನಿಗದಿತ ಸೂಚನೆಯನ್ನು ಕೊಟ್ಟು, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದಾಗ, ದೂರುದಾರರು ತನ್ನ ಕೈಯಿಂದ ತಲೆ ಒರೆಸಿಕೊಳ್ಳುವ ಮೂಲಕ ಸನ್ನೆ ಮಾಡಿ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ ಹಾಗೂ ಇವರ ಜೊತೆ ನೆರಳು ಸಾಕ್ಷಿ ಪಂಚ-1 ಪಾಜೀಲ್ ಅಹಮದ್ ಇವರು ಇದ್ದು, ಘಟನೆಯನ್ನು ಗಮನಿಸಬೇಕೆಂದು ಸೂಚಿಸಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಒಂದು ವಾಯ್ಸ್ ರೆಕಾರ್ಡ್‌ನ್ನು ಕೊಟ್ಟು ಉಪಯೋಗಿಸುವ ವಿಧಾನವನ್ನು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಪಂಚರ ಸಮಕ್ಷಮ ಪ್ರಾಯೋಗಿಕ ಪಂಚನಾಮೆಯನ್ನು ಮಾಡಿರುತ್ತಾರೆ.

v). ಅದೇ ದಿನ ಅಂದರೆ, ದಿನಾಂಕ: 06-06-2018 ರಂದು ದೂರುದಾರರು, ನೆರಳು ಸಾಕ್ಷಿಯೊಂದಿಗೆ ತುಮಕೂರು ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ಕಛೇರಿಯ ಕಾಂಪೌಂಡ್ ಒಳಗೆ ಬಂದು, ನಂತರ ಎದುರುದಾರರ ಕಛೇರಿಗೆ ಬಂದು ಎದುರುದಾರರನ್ನು ಮಾತನಾಡಿಸಿ, ಚೆಕ್ ಬಗ್ಗೆ ವಿಚಾರಿಸಿದಾಗ ಎದುರುದಾರರು ವಿಚಾರಿಸಿದಾಗ, ಸ್ವಲ್ಪ ಹಣ ಹೇಳಿದ್ದೆ ತಂದಿದೀರಾ ಎಂದು ಕೇಳಿದಾಗ, ದೂರುದಾರರು 3000/- ರೂ.ಗಳನ್ನು ತಂದಿದ್ದೀನಿ ಎಂದು ಹೇಳಿದಾಗ, ಎದುರುದಾರರು ದೂರುದಾರರಿಂದ ಫಿನಾಪ್ತಿಲೀನ್ ಪೌಡರ್ ಲೇಪಿತ 3000/- ರೂ.ಗಳನ್ನು ಲಂಚದ ಹಣವನ್ನು ಎಡಗೈಯಿಂದ ಪಡೆದು, ಪರಿಶೀಲಿಸಿ, ಬಲಗೈಯಿಂದ ಟೇಬಲ್‌ನಲ್ಲಿ ಡ್ರಾ ನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ದೂರುದಾರರಿಗೆ 50,000/- ರೂ.ಗಳ ಆಕ್ಸಿಸ್ ಬ್ಯಾಂಕ್ ಚೆಕ್ಕು ನಂ: 405360 ನ್ನು ನೀಡಿರುತ್ತಾರೆ. ನಂತರ ದೂರುದಾರರು ತನಿಖಾಧಿಕಾರಿಗೆ ನಿಗಧಿತ ಸೂಚನೆಯನ್ನು ಕೊಟ್ಟಿರುತ್ತಾರೆ. ನಂತರ ತನಿಖಾಧಿಕಾರಿಗಳು ಸ್ಥಳಕ್ಕೆ ಬಂದಾಗ, ದೂರುದಾರರು ಎದುರುದಾರರನ್ನು ತೋರಿಸಿಕೊಟ್ಟಿರುತ್ತಾರೆ. ನಂತರ ತನಿಖಾಧಿಕಾರಿ ಎದುರುದಾರರಿಗೆ ತನ್ನನ್ನು ಪರಿಚಯಿಸಿಕೊಂಡು, ಎದುರುದಾರರ ವಿರುದ್ಧ ಪ್ರಕರಣ ದಾಖಲಾಗಿರುವ ವಿಚಾರವನ್ನು ತಿಳಿಸಿ, ತನಿಖೆಯನ್ನು ಪ್ರಾರಂಭಿಸಿ, ತನಿಖಾಧಿಕಾರಿಯವರ ಸೂಚನೆ ಮೇರೆಗೆ ಸಿಬ್ಬಂದಿ ಎದುರುದಾರರ ಎರಡೂ ಕೈ ಬೆರಳುಗಳನ್ನು ಸೋಡಿಯಂ ಕಾರ್ಬೋನೈಟ್ ದ್ರಾವಣದಲ್ಲಿ ಪ್ರತ್ಯೇಕವಾಗಿ ತೊಳೆಸಿದಾಗ, ದ್ರಾವಣ ತಿಳಿಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ ಹಾಗೂ ತನಿಖಾಧಿಕಾರಿಯವರ ಸೂಚನೆ ಮೇರೆಗೆ, ಸಿಬ್ಬಂದಿಯು ಎದುರುದಾರರ ಟೇಬಲ್ ಡ್ರಾನಲ್ಲಿ ಲಂಚದ ಹಣವನ್ನು ಇಟ್ಟಿದ್ದ ಜಾಗವನ್ನು ಹತ್ತಿಯಿಂದ ಒರೆಸಿ ಸೋಡಿಯಂ ಕಾರ್ಬೋನೈಟ್ ದ್ರಾವಣದಲ್ಲಿ ತೊಳೆದಾಗ, ದ್ರಾವಣ ತಿಳಿಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ, ಹಣವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ, ಲಂಚದ ಹಣ ಪಡೆದ ಬಗ್ಗೆ ಸಮಜಾಯಿಷಿಕೆ ನೀಡುವಂತೆ ಎದುರುದಾರರಿಗೆ ತನಿಖಾಧಿಕಾರಿ

ಸೂಚಿಸಿದಾಗ, ಆ ಮೇರೆಗೆ ಎದುರುದಾರರು ತನ್ನ ಹೇಳಿಕೆಯನ್ನು ... **"ನಾನು ತುಮಕೂರು ಹಾಲು ಒಕ್ಕೂಟದಲ್ಲಿ ಉಪ-ವ್ಯವಸ್ಥಾಪಕರು (ಶೇ) ರಾಗಿ ಕೆಲಸ ನಿರ್ವಹಿಸುತ್ತಿದ್ದು, ದಿ: 06/06/2018 ರಂದು ತುರುವೇಕೆರೆ ತಾ: ಮಾವಿನಕೆರೆ ಗ್ರಾಮದ ಸುರೇಶ್ ಬಿನ್ ರಾಮಯ್ಯನವರು ಅವರಿಗೆ NIA Company ಬಂದಿದ್ದು, ರಾಸುವಿನ ಮರಣದ Cheque ನ್ನು ನೀಡಲು ಕೋರಿದ್ದು, ಅದರಂತೆ ಅವರಿಗೆ ನೀಡಲು ತಿಳಿಸಿದ್ದು, ಅವರೇ ನನಗೆ ಹಣಕೊಡುವುದಾಗಿ ತಿಳಿಸಿದರು, ನಾನು ಅವರಿಗೆ ಹಣವನ್ನು ಕೇಳಿರುವುದಿಲ್ಲ. ಅವರೇ ನನಗೆ ರೂ 500/- ಅಥವ ರೂ.3000/- ಕೊಡುತ್ತೇನೆ ಎಂದು ತಿಳಿಸಿದರು, ನಿಮ್ಮ ಇಷ್ಟ ನಾನು ಬಲವಂತ ಮಾಡುವುದಿಲ್ಲವೆಂದು ತಿಳಿಸಿದೆ. ಅವರು ಎಂದು ಸಂಜೆ 4-50 ಘಂಟೆಗೆ, ನನ್ನ ಕಛೇರಿಗೆ ಬಂದು ನನಗೆ ಅವರೇ ಹಣವನ್ನು ನೀಡಿದ್ದು, ಆಗು ಅವರೇ ಉದ್ದೇಶ ಪೂರ್ವಕವಾಗಿ ಎ.ಸಿ.ಬಿ. ರವರನ್ನು ಜೊತೆಯಲ್ಲಿ ಕರೆದುಕೊಂಡು ಬಂದು ನನ್ನನ್ನು ಟ್ರಾಪ್ ಮಾಡಿರುತ್ತಾರೆ. ನಾನು ಯಾವುದೇ ರೀತಿ ಒತ್ತಾಯ ಪೂರ್ವಕವಾಗಿ ಅವರನ್ನು ಬಲವಂತ ಮಾಡಿರುವುದಿಲ್ಲ. ನನಗೆ ನೀವು ಸಹಾಯ ಮಾಡಿ ನಾನು ನಿಮಗೆ ಹಣವನ್ನು ಕೊಡುತ್ತೇನೆ ಎಂದು ತಿಳಿಸಿದರು, ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ನನ್ನ ಸ್ವಾಭಿಮಾನ ಬಿಟ್ಟು ಒಪ್ಪಿಕೊಂಡೆ. ಇದರಲ್ಲಿ ನನ್ನದು ತಪ್ಪಿಲ್ಲ ಇದನ್ನು ತಮ್ಮ ಗಮನಕ್ಕೆ ತರುತ್ತಾ ನನ್ನ ಈ ತಪ್ಪನ್ನು ಮನ್ನಿಸಲು ತಮ್ಮಲ್ಲಿ ಕೋರಿಕೊಳ್ಳುತ್ತೇನೆ"** ಎಂದು ಹೇಳಿರುತ್ತಾರೆ. ನಂತರ **"ತನಿಖಾಧಿಕಾರಿ ಎದುರುದಾರರ ಸಮಜಾಯಿಷಿ ಬಗ್ಗೆ ದೂರುದಾರರ ಅಭಿಪ್ರಾಯ ಕೇಳಲಾಗಿ, ದೂರುದಾರರು ಎದುರುದಾರರು ನೀಡಿರುವ ಲಿಖಿತ ವಿವರಣೆ ತಪ್ಪಾಗಿರುವುದಾಗಿ ಹೇಳಿರುತ್ತಾರೆ"** ಎಂದು ಹೇಳಿಕೆ ನೀಡಿರುತ್ತಾರೆ. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿರುತ್ತಾರೆ. ಈ ಸಂಬಂಧವಾಗಿ ಟ್ರಾಪ್ ಮಹಜರನ್ನು ಪಂಚರ ಸಮಕ್ಷಮ ದಿ: 06/06/2018 ರಂದು ಸ: 5.00 ಯಿಂದ ರಾ: 8.00 ಗಂಟೆಯವರೆಗೆ ಬರೆದಿರುತ್ತಾರೆ.

vi). ತನಿಖಾಧಿಕಾರಿಯವರು, ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಧ್ವನಿಗೆ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಇರುವ ಬಗ್ಗೆ ವರದಿ ಕೋರಿ ವಿಧಿ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು ಇಲ್ಲಿಗೆ ಕಳುಹಿಸಿರುತ್ತಾರೆ.

vii). ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಪ್ತಲೀನ್ ಅಂಶ ಇರುವುದು ದೃಢಪಟ್ಟಿದೆ.

viii). ಎದುರುದಾರರಿಗೆ ದಿ: 23/08/2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, ಎದುರುದಾರರು ತನ್ನ ವಿವರಣೆಯನ್ನು ದಿ: 13/10/2021 ರಂದು ಸಲ್ಲಿಸಿರುತ್ತಾರೆ. ಸದರಿ ವಿವರಣೆಯನ್ನು ಪರಿಶೀಲಿಸಲಾಗಿ, ಎದುರುದಾರರು ತನ್ನ ವಿವರಣೆಯಲ್ಲಿ ತಾನು ಮೂಲತ: ಸರ್ಕಾರಿ ನೌಕರನಾಗಿರುವುದಿಲ್ಲ. ತುಮಕೂರು ಹಾಲು ಒಕ್ಕೂಟ ಸರ್ಕಾರದಿಂದ ಯಾವುದೇ ಧನ

ಸಹಾಯ ಪಡೆಯುತ್ತಿಲ್ಲ. ರೈತರಿಂದ ಹಾಲನ್ನು ಪಡೆದು ಅದನ್ನು ಮಾರಾಟ ಮಾಡಿ ಹಾಗೂ ಉಪ ಉತ್ಪನ್ನಗಳಿಂದ ಬರುವ ಆದಾಯದಿಂದ ಒಕ್ಕೂಟವು ಅಧಿಕಾರಗಳಿಗೆ ವೇತನ ನೀಡುತ್ತಾರೆ. ... ಹಾಗಾಗಿ ಈ ಸಂಬಂಧವಾಗಿ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರಿಂದ ಹಿಂಬರಹ ಪಡೆದು ದಾಖಲಿಸಿರುತ್ತಾರೆ. ಸದರಿ ಹಿಂಬರಹ ಪರಿಶೀಲಿಸಲಾಗಿ "ತುಮಕೂರು ಸಹಕಾರಿ ಹಾಲು ಒಕ್ಕೂಟವು ಸಹಕಾರಿ ಸಂಸ್ಥೆಯಾಗಿದ್ದು, ಒಕ್ಕೂಟದ ಸಿಬ್ಬಂದಿ/ನೌಕರರು ಕರ್ನಾಟಕ ರಾಜ್ಯ ಸರ್ಕಾರದಿಂದ ಯಾವುದೇ ಅನುಧಾನ ಬರುತ್ತಿಲ್ಲ" ಎಂಬುದಾಗಿರುತ್ತದೆ. ಹಾಗಾಗಿ ಎದುರುದಾರರು ತಾನು ತುಮಕೂರು ಸಹಕಾರಿ ಹಾಲು ಒಕ್ಕೂಟ ಸಂಸ್ಥೆಯಲ್ಲಿ ತಾನು ಉಪ-ವ್ಯವಸ್ಥಾಪಕರಾಗಿ ಕರ್ತವ್ಯದಲ್ಲಿದ್ದ ಒಪ್ಪಿಕೊಳ್ಳುತ್ತಾರೆ. ಮುಂದೂವರೆದು, ತಮ್ಮ ವಿವರಣೆಯಲ್ಲಿ ಪರಿವೀಕ್ಷಣಾ ಟಿಪ್ಪಣಿಯ ಕಂಡಿಕೆ 2(i) ರಿಂದ (xii) ಹಾಗೂ ಕಂಡಿಕೆ 2, 3, 4ರ ಎಲ್ಲಾ ಅಂಶಗಳನ್ನು ಸಾರಸಗಟಾಗಿ ಅಲ್ಲಗಳೆದು, ತನ್ನ ವಿರುದ್ಧ ಇರುವ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೋರಿರುತ್ತಾರೆ. ಎದುರುದಾರರು ನೀಡಿರುವ ಸಮಜಾಯಿಷಿಕೆಯನ್ನು ಈ ಹಂತದಲ್ಲಿ ಪರಿಗಣಿಸಲು ಬರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಹಾಗಾಗಿ ಇವರ ವಿರುದ್ಧ ವಿಚಾರಣೆ ಮಾಡದೆ ಇರಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳಿಂದ ಮೇಲ್ನೋಟಕ್ಕೆ ದುರ್ನಡತೆ ಕಂಡು ಬರುತ್ತದೆ.

3. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

4. 25. ಈ ಮೇಲ್ಕಂಡ ಅಂಶಗಳನ್ನು ಮತ್ತು ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆಯನ್ನು ಪಾಲಿಸದೇ, ಕರ್ತವ್ಯ ಶ್ರದ್ಧೆಯನ್ನು ಹೊಂದಿರದೆ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸುತ್ತ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 2021) ನಿಯಮ 3(1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

5. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

28/1/22

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು-1
ಕರ್ನಾಟಕ ರಾಜ್ಯ, ಬೆಂಗಳೂರು